**ದಿಃ10.06.2024 OS No. 37/2018 DW-1**

ದಿಃ10.06.2024 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಜೆ.ಟಿ.ಪಿ. ವಕೀಲರಿಂದ**

1. ವಾದಿ ಮತ್ತು ಪ್ರತಿವಾದಿಯ ತಂದೆಯ ಹೆಸರು ಈರೇಗೌಡ. ನಾನು ಜನಿಸುವ ಪೂರ್ವದಲ್ಲಿಯೇ ಈರೇಗೌಡರು ಮೃತಪಟ್ಟಿದ್ದರು. ಈರೇಗೌಡರಿಗೆ ಒಟ್ಟು ಎಷ್ಟು ಆಸ್ತಿಗಳು ಇತ್ತು ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈರೇಗೌಡರು ತನ್ನ ಇಬ್ಬರು ಮಕ್ಕಳಿಗೆ ತನ್ನ ಆಸ್ತಿಗಳನ್ನು ಭಾಗ ಮಾಡಿ ಕೊಟ್ಟಿದ್ದರು ಎಂದರೆ ಸರಿಯಲ್ಲ ಸಾಕ್ಷಿಯು ತನ್ನ ಅಜ್ಜಿ ಆ ರೀತಿ ವಿಭಾಗ ಮಾಡಿ ಆಸ್ತಿ ನೀಡಿದ್ದಾಗಿ ನುಡಿಯುತ್ತಾರೆ. ನನ್ನ ತಾತ ಈರೇಗೌಡರಿಗೆ 5 ಜನ ಗಂಡುಮಕ್ಕಳು 4 ಜನ ಹೆಣ್ಣುಮಕ್ಕಳು.

2. ವಾದಿ ನನಗೆ ಜಮೀನನ್ನು ಮಾರಾಟ ಮಾಡುವ ಆರು ತಿಂಗಳ ಪೂರ್ವದಲ್ಲಿ ವಾದಿ ಮತ್ತು ಪ್ರತಿವಾದಿ ಇಬ್ಬರು ಆಸ್ತಿಗಳನ್ನು ನನ್ನ ಅಜ್ಜಿಯ ಮುಖೇನ ವಿಭಾಗ ಮಾಡಿಕೊಂಡಿದ್ದರು. ನನ್ನ ಅಜ್ಜಿ 2004 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ನಾನು ದಿಃ10.02.1978 ರಲ್ಲಿ ಜನಿಸಿರುತ್ತೇನೆ. ನನ್ನ ಅಜ್ಜಿ ಆ ರೀತಿ ಆಸ್ತಿಗಳಲ್ಲಿ ವಿಭಾಗ ಮಾಡಿದ್ದರು ಎಂದು ತೋರಿಸಲು ದಾಖಲೆಗಳು ಇದ್ದು ಅವು ವಾದಿಯ ಬಳಿ ಇರುತ್ತವೆ.

3. ವಾದಿ ತಾನು ದಾವಾ ಸ್ವತ್ತನ್ನು ಮಾರಾಟ ಮಾಡಿಲ್ಲ ಎಂದು ಹೇಳಿ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. 1998 ರಲ್ಲಿ ನನಗೆ 20 ವರ್ಷ ವಯಸ್ಸು ಆಗಿತ್ತು. ನನ್ನ ತಂದೆ ಪ್ರತಿವಾದಿ ಮತ್ತು ವಾದಿಯ ನಡುವೆ ದಾವಾ ಸ್ವತ್ತಿನ ಮಾರಾಟದ ವ್ಯವಹಾರ ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ದಾವಾ ಸ್ವತ್ತಿಗೆ

ಸಂಬಂಧಿಸಿದಂತೆ ಆದ ನೊಂದಾಯಿತ ಕ್ರಯಪತ್ರಕ್ಕೆ ನಾನು ಸಹಿ ಹಾಕಿರುವುದಿಲ್ಲ. ಸದರಿ ಕ್ರಯ ಪತ್ರವನ್ನು ಕೃಷ್ಣ ಮೂರ್ತಿ ಎಂಬುವವರು ತಯಾರಿಸಿದ್ದರು.

4. ನನ್ನ ತಂದೆಗೆ ವಯಸ್ಸಾಗಿದ್ದು ಅವರಿಗೆ ವಯೋಸಹಜ ಖಾಯಿಲೆಗಳು ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಪ್ರಕರಣದಲ್ಲಿ ನನ್ನ ತಂದೆಯ ಪರವಾಗಿ ನಾನೇ ತಕರಾರನ್ನು ಹೇಳಿ ಹಾಕಿಸಿರುತ್ತೇನೆ. ನಾನು ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ದಾವೆ ಹೂಡಿದ ಕಾಲಕ್ಕೆ ತಕರಾರನ್ನು ಸಲ್ಲಿಸಿರುತ್ತೇನೆ.

5. ವಾದಿಗೆ ಕುಟುಂಬದಿಂದ ಒಟ್ಟು 36 ಗುಂಟೆ ಜಮೀನು ಬಂದಿತ್ತು ಎಂದರೆ ಸಾಕ್ಷಿಯು ಮೊದಲು ಆತನಿಗೆ 36 ಗುಂಟೆ ಜಮೀನು ಬಂದಿದ್ದು ತನ್ನ ತಂದೆಗೆ ಆತ ಮಾರಾಟ ಮಾಡಿದ ನಂತರ ಅದರಲ್ಲಿ ಅಷ್ಟು ವಿಸ್ತೀರ್ಣದ ಜಮೀನು ಇಲ್ಲ ಎಂದು ನುಡಿಯುತ್ತಾರೆ. ವಾದಿಯು ವಾದ ಪತ್ರದಲ್ಲಿ ತಿಳಿಸಿರುವ ಚಕ್ಕುಬಂದಿಯನ್ನು ನೋಡಿರುತ್ತೇನೆ. ಸದರಿ ಚಕ್ಕುಬಂದಿಯಲ್ಲಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಚಿಕ್ಕೈದೇಗೌಡರ ಜಮೀನು, ಉತ್ತರಕ್ಕೆ ಸರ್ಕಾರಿ ಹಳ್ಳ ಮತ್ತು ದಕ್ಷಿಣಕ್ಕೆ ವಾದಿಯ ಉಳಿಕೆ 14 ಗುಂಟೆ ಜಮೀನು.

6.ದಿಃ09.09.1998 ರಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿಂತೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ. ಆ ಪತ್ರಕ್ಕೆ ವಾದಿ, ಪ್ರತಿವಾದಿ, ಸಾಕ್ಷಿದಾರರಾಗಿ ಮರೀಗೌಡ ಮತ್ತು ರಾಜೇಗೌಡ ಸಹಿ ಮಾಡಿರುತ್ತಾರೆ. ಸದರಿ ಸಾಕ್ಷಿದಾರರು ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಬರುತ್ತಾರೆಯೇ ಎಂಬ ಬಗ್ಗೆ ನಾನು ಅವರಲ್ಲಿ ಕೇಳಬೇಕು. ಸದರಿ ಕ್ರಯ ಪತ್ರಕ್ಕೆ ಮಾಹಿತಿಯನ್ನು ವಾದಿಯೇ ನೀಡಿದ್ದರು. ನನ್ನ ತಂದೆ ಪತ್ರಕ್ಕೆ ಮಾಹಿತಿಯನ್ನು ನೀಡಿರುವುದಿಲ್ಲ. ನಮಗೆ

ಜಮೀನನ್ನು ಮಾರಾಟ ಮಾಡುವ 6-7 ವರ್ಷಗಳ ಮುಂಚೆ ನಮ್ಮ ಅಜ್ಜಿ ವಿಭಾಗ ಮಾಡಿ ಕೊಟ್ಟಿದ್ದರು. ಸದರಿ ವಿಭಾಗ ಪತ್ರ ಮತ್ತು ನನ್ನ ಅಜ್ಜಿಯ ಹೆಸರಿನಲ್ಲಿ ಇದ್ದ ಪಹಣಿ ಪತ್ರಿಕೆಗಳನ್ನು ವಾದಿಯೇ ನನಗೆ ತೋರಿಸಿದ್ದು ನಾನು ಅವುಗಳನ್ನು ನೋಡಿರುತ್ತೇನೆ. ನನ್ನ ಅಜ್ಜಿ ಜೀವಿತ ಕಾಲದಲ್ಲಿಯೇ ದಾವಾ ಆಸ್ತಿ ಪೌತಿ ಆಧಾರದ ಮೇಲೆ ನನ್ನ ಚಿಕ್ಕಪ್ಪ ಮರೀಗೌಡರಿಗೆ ದಾಖಲಾಗಿತ್ತು. ತದನಂತರ ಆತನ ಹೆಸರಿಗೆ ಪಹಣಿ ಪತ್ರಿಕೆಗಳು ದಾಖಲಾಗಿದ್ದವು. ಸದರಿ ಮರೀಗೌಡರು ದಾವಾ ಸ್ವತ್ತನ್ನು ಪಿ.ಎಲ್.ಡಿ. ಬ್ಯಾಂಕ್ ಗೆ ಆಧಾರ ಮಾಡಿದ್ದರು ಎಂದರೆ ಸಾಕ್ಷಿಯು ವಿಭಾಗ ಆಗುವ ಪೂರ್ವದಲ್ಲಿ ನಮ್ಮ ಕುಟುಂಬದ ಎಲ್ಲಾ ಸದಸ್ಯರು ಒಪ್ಪಿಗೆ ನೀಡಿ ಆಧಾರ ಮಾಡಿದ್ದಾಗಿ ನುಡಿಯುತ್ತಾರೆ.

7. 2015-16 ನೇ ಸಾಲಿನ ಪಹಣಿ ಪತ್ರಿಕೆಯಲ್ಲಿ ವಾದಿಯ ಹೆಸರಿಗೆ 36 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನ ಮೇಲೆ ಪಿ.ಎಲ್.ಡಿ. ಬ್ಯಾಂಕ್ ನಿಂದ ವಾದಿಯು 75 ಸಾವಿರ ಸಾಲವನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಮರೀಗೌಡ ನ ಹೆಸರಿಗೆ 2014-15 ನೇ ಸಾಲಿನಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆ ಇತ್ತು ಎಂದರೆ ಸರಿಯಲ್ಲ. 2006-07 ಮತ್ತು 2016-17 ನೇ ಸಾಲಿನಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆಗಳು ವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ.

8. ದಾವಾ ಅನುಸೂಚಿ ಸ್ವತ್ತಿನ ಒಟ್ಟು 36 ಗುಂಟೆ ಜಮೀನನ್ನು ಸಾಲದ ಹಣ ತೀರುವಳಿ ಮಾಡದ ಕಾರಣ ಗ್ರಾಮೀಣ ಬ್ಯಾಂಕ್ ನವರು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿ. ತದನಂತರ ಆ ಜಮೀನಿನ ಕಂದಾಯ ದಾಖಲೆಗಳು ಗ್ರಾಮೀಣ ಬ್ಯಾಂಕ್ ಹೆಸರಿಗೆ ವರ್ಗಾವಣೆ ಆಗಿದ್ದವು ಎಂದರೆ ಸರಿ. ಕ್ರಯ ಪತ್ರ ಆಯಿತು ಎನ್ನಲಾದ ದಿನದಿಂದ 2023 ನೇ ಸಾಲಿನವರೆಗೂ

ದಾವಾ ಸ್ವತ್ತಿನ ಕಂದಾಯ ದಾಖಲೆಗಳು ವಾದಿ ಮತ್ತು ಮರೀಗೌಡನ ಜಂಟಿ ಹೆಸರಿನಲ್ಲಿ ಮುಂದುವರೆದುಕೊಂಡು ಬಂದಿರುತ್ತವೆ ಎಂದರೆ ಸರಿಯಲ್ಲ. ಗ್ರಾಮೀಣ ಬ್ಯಾಂಕ್ ಗೆ ಹಣವನ್ನು ಮರಳಿಸಿದ ನಂತರ ದಾವಾ ಸ್ವತ್ತಿನ ದಾಖಲೆಗಳು ಮರೀಗೌಡರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಮರೀಗೌಡರು ಕುಟುಂಬದ ಎಲ್ಲಾ ಆಸ್ತಿಗಳನ್ನು ಆಧಾರ ಮಾಡಿದ್ದರು ಎಂಬ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

9. ತಕರಾರು ಸಲ್ಲಿಸುವ ಪೂರ್ವದಲ್ಲಿ ಎಂ.ಆರ್.26/2014-15 ರ ಪತ್ರಿಕೆಯನ್ನು ನಾನು ನೋಡಿರುವುದಿಲ್ಲ. ಸದರಿ ದಾಖಲೆ ವಾದಿಯ ಹೆಸರಿನಲ್ಲಿ ಇತ್ತು ಎಂದರೆ ಇತ್ತು ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. 2012 ರಿಂದ 2016 ನೇ ಸಾಲಿನವರೆಗೂ ದಾವಾ ಸ್ವತ್ತು ಪಿ.ಎಲ್.ಡಿ. ಬ್ಯಾಂಕ್ ನವರ ಸ್ವಾಧೀನದಲ್ಲಿ ಇತ್ತು ಎಂದರೆ ಸರಿಯಲ್ಲ. ಮರೀಗೌಡರು ತಾವು ಸಾಲ ಕಟ್ಟಲು ಆಗದ ಕಾರಣ ದಾವಾ ಸ್ವತ್ತು ಒಟ್ಟು 36 ಗುಂಟೆ ಜಮೀನನ್ನು ಬ್ಯಾಂಕ್ ನವರಿಗೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. 1998 ರಲ್ಲಿ ಕ್ರಯ ಆಯಿತು ಎನ್ನಲಾದ ಸಮಯಕ್ಕೆ ಅದರ ಪೂರ್ವದಲ್ಲಿ ಮತ್ತು ತದನಂತರ ಸಹಾ ದಾವಾ ಸ್ವತ್ತಿದ ದಾಖಲೆಗಳು ವಾದಿಯ ಹೆಸರಿನಲ್ಲಿಯೇ ಇದ್ದು ಆತ ಬ್ಯಾಂಕ್ ಗೆ ಸಾಲವನ್ನು ಮರುಪಾವತಿ ಮಾಡಿ ಜಮೀನನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1998 ರಿಂದ 2023 ರ ವರೆಗಿನ ಪಹಣಿ ಪತ್ರಿಕೆಗಳನ್ನು ಸಲ್ಲಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.